ಶ್ರೀ ಡಿ. ದೇವರಾಜ್ ಅರಸ್.—ನೀವು ಹೇಳಿದಂಥ ಸಲಹೆಯನ್ನು ಯೋಚನೆ ಮಾಡಿ.

ಮಾನ್ಯ ಅಧ್ಯಕ್ಷಣೀಯವರೇ ಅವರು ಹೇಳಿದ ಹಾಗೆ ಯಾವುದೇ ಒಂದು ವಿಷಯವನ್ನು ಲಂಬಿಸಿ ಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ಏನಾದರೂ ಅವರಿಗೆ ಅಕಾಮಡೇಟ್ ಮಾಡುವುದಕ್ಕೆ ಸಾಧ್ಯವಿದ್ದರೆ ಅದನ್ನು ನೋಡಿ ಹೇಳುತ್ತೇನೆಂದು ಆಗಲೇ ಹೇಳುತ್ತೇನೆ.

ಶ್ರೀ ಎನ್. ಬಸವಯ್ಯ.—ತಾವು ಈಗ ತಾನೇ ೧೫% ರಂತೆ ಇಂಟರ್‌ವ್ಯೂ ಕಳುಹಿಸಿದ್ದಾರೆಂದು ಹೇಳಿದಿರಿ, ಆದರೆ ಕೆಲವು ಸಂರ್ಭಗಳಲ್ಲಿ ೧೫% ರಂತೆ ಇಂಟರ್‌ವ್ಯೂ ಕರೆದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ್ ಅರಸ್.—ಅದು ರೂಲ್ಸ್‌ನಲ್ಲಿದೆ. ಅದರ ಪ್ರಕಾರ ಮಾಡಿರುತ್ತಾರೆ.

ಶ್ರೀ ಕೊಣಂದೂರು ಲಿಂಗಪ್ಪ.—ಸ್ವಾಮಿ ಮಾನ್ಯ ದೇವೇಗೌಡರವರು ಕೇಳಿದ ಪ್ರಶ್ನೆಗೆ ಪೂರಕವಾಗಿ ಒಂದು ಪ್ರಶ್ನೆ ಕೇಳುತ್ತಿದ್ದೇನೆ. ಅರ್ಬನ್ ಮತ್ತು ರೂರಲ್ ಏರಿಯಾದವರಿಗೆ ಸಮನಾದ ಸೌಲಭ್ಯಗಳು ಇವೆ. ಆದರೆ ರೂರಲ್ ಏರಿಯಾದವರಿಗೆ ಹೆಚ್ಚಿನ ವಿಶೇಷವಾದಂಥ ಜಿಜರ್ವೇಷನ್ ಮಾಡುವುದಕ್ಕೆ ಏನಾದರೂ ಸಾಧ್ಯವೆ ? ಅರ್ಬನ್ ಮತ್ತು ರೂರಲ್ ಏರಿಯಾದವರಿಗೆ ಡಿಸ್ಪೆಂಕ್ಷನ್ ಇಡುವುದಕ್ಕೆ ಸಾಧ್ಯವೇ ?

ಶ್ರೀ ಡಿ. ದೇವರಾಜ್ ಅರಸ್.—ತಾವು ಕೇಳುತ್ತಿರುವುದು ಅರ್ಬನ್ ಮತ್ತು ರೂರಲ್ ಏರಿಯಾದವರಿಗೆ ಡಿಸ್ಪೆಂಕ್ಷನ್ ಮಾಡಿ ಎಂದು, ಬಹುಶ : ಕಾನ್‌ಸ್ಟಿಟ್ಯೂಷನ್ ಪ್ರಕಾರ ಅದನ್ನು ಮಾಡುವುದಕೆ ಕಷ್ಟವಾಗುತ್ತದೆ.

* *Postponement of Repayment of Short Term Loans*

528. K. H. HANUME GOWDA (Hassan) —Will the Minister for Co-operation be pleased to state.—

(*a*) the difficulties for the Government in postponing the repay ment of loan instalments for one year by receiving the interest due for that year in respect of loan received by the ryots in certain areas where crops have failed for want of rains the ryots are unable to repay the medium term loan taken from Co-operative Societies :

(*b*) whether the Government is of the opinion that by such an arrangement the ryots will get more relief ?

SRI S. M. KRISHNA (Minister for Industries and Parlimentary Affairs).— On behalf of SRI K. H. RANGANATH (Minister for Co-operation).—

(*a*) There is no difficulty in postponing the repayment of medium term loans taken by the members of agricultural Co-operative Societies, where the anewari has been declared as less than 6 annas by the Revenue Officers.

(*b*) Yes.

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ ನಾನು ಇಳಿನೇ ಪ್ರಶ್ನೆಯನ್ನು ಕೇಳುತ್ತೇನೆ.

† ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಅಧ್ಯಕ್ಷರೇ ಉತ್ತರದಲ್ಲಿ ತಪ್ಪು ಪ್ರಿಂಟ್ ಆಗಿದೆ ಅದನ್ನು ತಿದ್ದಿ ಕೊಳ್ಳಬೇಕು. ಅದು ಈ ರೀತಿ ಇದೆ, ವಿಂಡಿಯಂ ಟರ್ಮ್ ಲೋನ್ ಎಂದು ಇದೆ ಅದನ್ನು ಶಾರ್ಟ್ ಟರ್ಮ್ ಲೋನ್ ಎಂದು ಮಾಡಿಕೊಳ್ಳಬೇಕು.

ಶ್ರೀ ಕೆ. ಎಚ್ ಹನುಮೇಗೌಡ.— ಸ್ವಾಮಿ ಈಗ ಅಲ್ಪಾವಧಿ ಸಾಲವನ್ನು ತೆಗೆದುಕೊಂಡು ಸಾಲವನ್ನು ಕಾಲಕ್ಕೆ ಸರಿಯಾಗಿ ವಾಪಸ್ ಕೊಡದೇ ಹೋದರೆ, ರೆಕವರಿ ಆಗಬೇಕಾದರೆ ೩-೪ ವರ್ಷವಾಗುತ್ತದೆ. ದುಡ್ಡು ಏನೋ ಸಂಬಂಧಪಟ್ಟ ರೈತನಿಂದ ವಸೂಲು ಆಗುತ್ತದೆ. ಆದಂದರಿಂದ ಈಗ ಆರು ಆಣೆಗಿಂತ ಕಡಿಮೆ ಬೆಳೆ ಬರತಕ್ಕಂಥ ಪ್ರದೇಶದ ರೈತರು ಅಲ್ಪಾವಧಿ ಸಾಲವನ್ನು ಮರುಪಾವತಿ ಮಾಡುವುದಕ್ಕೆ ಸಾಧ್ಯವಾಗದೇ ಹೋದರೆ ಬಡ್ಡಿಯನ್ನು ತೆಗೆದುಕೊಂಡು ಕನ್‌ಟಿನ್ಯೂ ಮಾಡಬೇಕು ಆ ರೀತಿ ಒಂದು ಜನರಲ್ ಆರ್ಡರನ್ನು ಮಾಡಿ ಸಂಬಂಧಪಟ್ಟ ರೆವಿನ್ಯೂ ಇಲಾಖೆಗೂ ಕಳುಹಿಸಿಸುವುದಕ್ಕೆ ಸಾಧ್ಯವೇ ಸ್ವಾಮಿ. ?

ಶ್ರೀ ಎಸ್. ಎಂ. ಕೃಷ್ಣ.—ವರ್ಷವನ್ನು ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾದಿಂದ ಅಗ್ರಿಕಲ್ಚರಲ್ ಕ್ರೆಡಿಟ್ ಡಿಪಾರ್ಟ್‌ಮೆಂಟಿಗೆ ಕೊಟ್ಟಿರತಕ್ಕಂಥ ಗೈಡ್ ಲೈನ್ಸ್‌ನ ಆಧಾರದಮೇಲೆ ಮಾಡಬೇಕಾಗುತ್ತದೆ. ನಮಗೆ ಕೊಟ್ಟಿರತಕ್ಕಂಥ ಗೈಡ್ ಲೈನ್ಸ್ ಪ್ರಕಾರ, ಆಣೆವಾರು ಪದ್ಧತಿ ಪ್ರಕಾರ ೬ ಆಣೆಗಿಂತ ಕಡಿಮೆ ಬೆಳೆ ಬರತಕ್ಕಂಥ ಪ್ರದೇಶ, ಜಾಸ್ತಿ ಬರತಕ್ಕಂಥ ಪ್ರದೇಶ ಎಂದು ಡೆಪ್ಯುಟಿ ಕಮಿಷನರ್‌ರವರು ಕೊಡತಕ್ಕಂಥ ಸರ್ಟಿಫಿಕೇಟ್‌ಗಳ ಆಧಾರದ ಮೇಲೆ ಶಾರ್ಟ್‌ಟರ್ಮ್‌ಲೋನ್ ಮತ್ತು ಮಿಡಿಯಂ ಟರ್ಮ್ ಲೋನ್ ಎಂದು ಕನ್‌ವರ್ಟ್ ಮಾಡಬೇಕೆಂದು ಹೇಳಿ ಅದರ ಪ್ರಕಾರ ಈಗ ನಡೆಸಿಕೊಂಡು ಹೋಗುತ್ತಿದ್ದೇವೆ. ಇದರಲ್ಲಿ ಏನಾದರೂ ಸುಧಾರಣೆ ಮಾಡಬೇಕೆಂದು ತಾವು ಹೇಳುವುದಿದ್ದರೆ ಹೇಳಿ.

ಶ್ರೀ ಕೆ ಎಚ್. ಹನುಮೇಗೌಡ.—ಅಲ್ಪಾವಧಿ ಸಾಲವನ್ನು ತೆಗೆದುಕೊಂಡ ರೈತನು ಪುನ : ಆ ಸಾಲವನ್ನು ಕಟ್ಟಿಲಿಕ್ಕೆ ಆಗದಿದ್ದರೆ ಅವನ ಮೇಲೆ ದಾವ ಹಾಕಿ ಕೋರ್ಟಿನಿಂದ ರೆಕವರಿ ಮಾಡಿಸಬೇಕೆಂದರೆ ೩-೪ ವರ್ಷಗಳು ಹಿಡಿಯುತ್ತದೆ. ಆದುದರಿಂದ ಸಾಲವನ್ನು ಕಟ್ಟಲಿಕ್ಕೆ ಆಗದಿದ್ದರೆ ಅವರಿಂದ ಬಡ್ಡಿಯನ್ನು ಕಟ್ಟಿಸಿಕೊಂಡು ಕನ್‌ಟಿನ್ಯೂ ಮಾಡುವುದಕ್ಕೆ ಒಂದು ಜನರಲ್ ಆರ್ಡರನ್ನು ಹೊರಡಿಸಿ, ರೆವಿನ್ಯೂ ಇಲಾಖೆಗೂ ಮತ್ತು ಕೋ ಆಪರೇಟಿವ್ ಇಲಾಖೆಗೂ ಕಳುಹಿಸಿಸುವುದಕ್ಕೆ ಸಾಧ್ಯವೇ ಎಂದು ನಾನು ಕೇಳುತ್ತಿರುವುದು.

SRI H. D. DEVEGOWDA.—Where is the need for a certificate from the Deputy Commissioner ? ಸಾಮಾನ್ಯವಾಗಿ ಆರು ಆಣೆಗಿಂತ ಕಡಿಮೆ ಬೆಳೆಯಾಗಿದ್ದರೆ, ಆ ರೀತಿ ಸರ್ಟಿಫಿಕೇಟ್‌ನ್ನು ಡೆಪ್ಯುಟಿ ಕಮಿಷನರ್‌ರವರು ಕೊಡಬೇಕಾದರೆ ಕಷ್ಟ. ಅವರು ಸಾಮಾನ್ಯವಾಗಿ ರೆಕವರಿ ಮಾಡಿ ಎಂದೇ ಹೇಳುತ್ತಾರೆ. ಅವರ ಮೇಲೆ ಅಪಾದನೆ ಮಾಡಬೇಕೆಂದು ಹೇಳುತ್ತಿಲ್ಲ. ೬ ಆಣೆಗಿಂತ ಕಡಿಮೆ ಬೆಳೆ ಬಂತು ಎನ್ನುವ ವಿಷಯ ಗೊತ್ತಾದ ಮೇಲೆ ಆ ವರ್ಷ ಬಡ್ಡಿಯನ್ನು ತೆಗೆದುಕೊಂಡು ಲೋನ್ ಪೋಸ್ಟ್‌ಪೋನ್ ಮಾಡತಕ್ಕಂಥದ್ದು.

2-00 P.M.

ಈಗ ಕೆಲವು ಕಡೆ, ಒಂದೊಂದು ತಾಲ್ಲೂಕುಗಳಲ್ಲಿ ಕೆಲವು ಸೊಸೈಟಿಗಳನ್ನು ಬ್ಯಾಂಕಿಗೆ ವಹಿಸಿಕೊಡುತ್ತಾರೆ. ಕೆಲವು ಕೋ ಆಪರೇಟಿವ್ ಸೊಸೈಟಿ ಮುಖೇನ, ಡಿಸ್ಟ್ರಿಕ್ಟ್ ಕೊ ಆಪರೇಟಿವ್ ಬ್ಯಾಂಕ್ ಮುಖೇನ ಹಂಚುತ್ತಾರೆ, ಕೆಲವು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮುಖೇನ ಹಂಚುತ್ತಾರೆ. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಕೋಆಪರೇಟಿವ್ ಬ್ಯಾಂಕ್ ಅಡಾಪ್ ಮಾಡತಕ್ಕ ನೀತಿಯನ್ನು ಅವರು ಅನುಸರಿಸುವುದಿಲ್ಲ. Even Anewari is below six annas..... ನಮ್ಮದೇ ಕೆಲವು ಗೈಡಿಂಗ್ ಪ್ರಿನ್ಸಿಪಲ್ಸ್ ಇದೆ. We are not going to adopt that principle. ಆ ಭಾಗದ ರೈತರಿಗೆ ಅನಾಹುತವಾಗಿರುವುದನ್ನು ಅರ್ಥ ಮಾಡಿಕೊಂಡು ಎರಡು ಬ್ಯಾಂಕುಗಳ ಮುಖೇನ ಕೊಟ್ಟಂತ ಸಾಲವನ್ನು ಆರು ಆಣೆಕಡಿಮೆ ಇರುವ ಕಡೆ, ಸಾಲವನ್ನು ಪೋಸ್ಟ್‌ಪೋನ್ ಮಾಡುವುದಕ್ಕೆ ಸರ್ಕಾರದಿಂದ ನಿರ್ದಿಷ್ಟವಾದ ನಿರ್ದೇಶನ ಕೊಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ದೇವೇಗೌಡರು ಒಂದು ಸಲಹೆ ಮಾಡಿದ್ದಾರೆ ಅದನ್ನು ಒಪ್ಪಬಹುದು, for example Drought affected areas. There is no need to get special certificate from the Deputy Commissioner or the Tahsildar. For example–part of Hassan District or the whole of Gulbarga District. There, is no point in insisting certificates from the Deputy Commissioner. I accept that proposition. Probably we will be passing on information to the Department concerned to take suitable action in the matter.

SRI D. DEVARAJ URS.—We are not such whether the Government can itself give directions or not. We have to move the Reserve Bank though the method of issuing loans and recovery may look archaic : particularly so far as dry crops are concerned which depend upon seasonal varitations. We may to liberalise the policy as is contemplated in the question, Now the question is blooming so much here, I think the Government will take up this matter with the Reserve Bank though the Reserve Bank we will be in a position to do some thing in the matter. Government cannot say directly te pass an order, in that matter.

ಶ್ರೀ ಹೆಚ್. ಡಿ. ದೇವೇಗೌಡ —ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ ಆಪರೇಟಿವ್ ಬ್ಯಾಂಕ್ ಕೊಡತಕ್ಕ ಸಾಲಕ್ಕೆ ನೀವು ನಿರ್ಣಯ ತೆಗೆದುಕೊಳ್ಳುವುದಕ್ಕೆ ನಿಮಗೆ ಅವಕಾಶ ಇದೆ, Government in consultation with the Registrar of Co-operative societies and Apex Bank ಮಾಡಬಹುದು. We are also examining the matter in the public Accounts Committee. We know something about it. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಕೆಲವು ಹಳ್ಳಿಗಳನ್ನು ಅಡಾಪ್ಟ್ ಮಾಡಿಕಂತ್ತಾರೆ. ಅಲ್ಲಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಪ್ರಾಬ್ಲಮ್ ಅರೈಸ್ ಆಗುತ್ತದೆ. ಎರಡು ಕಡೆ ಲೋನ್ ಜಾನ್‌ಲೈಸ್ ಮಾಡಿದಾಗ ರೈತನಿಗೆ ಒಳ್ಳೆಯ ಬೆನಿಫಿಟ್ ಸಿಕ್ಕುತ್ತದೆ. ರೈತನಿಗೆ ಬೆನಿಫಿಟ್ ಸಿಕ್ಕುವ ಹಾಗೆ ಅವಕಾಶ ಮಾಡಿಕೊಡಬೇಕು. ಡಿಸ್ಟ್ರಿಕ್ಟ್ ಕೋ ಆಪರೇಟಿವ್ ಬ್ಯಾಂಕ್‌ನಿಂದ ಸಾಲ ಪಡೆಯತಕ್ಕ ರೈತನಿಗೆ ಟ್ರwhat are all facilities that is available, the same facilities should be made available even to the farmer who draws from the state Bank also. ರೇಟ್ ಆಫ್ ಇಂಟರೆಸ್ಟ್‌ನಲ್ಲೂ ಸಹ ಡಿಫರಿಯೇಷನ್ ಇದೆ, ಪೀನಲ್ ಇಂಟರೆಸ್ಟ್ ಜೊತೆಗೆ ರೆಗ್ಯುಲರ್ ಇಂಟರೆಸ್ಟ್ ಹಾಕತಕ್ಕಂಥಾದ್ದು ಇದೆ. ಇದರಲ್ಲಿ ಬಹಳ ವೆತ್ಯಾಸ ಇದೆ ಇದು ರೈತನ ತಪ್ಪು ಅಲ್ಲ. For our own facilities some villages will be allotted to State Bank of Mysore and some to the District Co-operative Banks. ನಾರ್ಮಲಿ ಸ್ವಲ್ಪ ಎಗ್ಸಾಮಿನ್ ಮಾಡಿಸಿ, ಏನು ಬೆನಿಫಿಟ್ ಕೊಡುವುದಕ್ಕೆ ಸಾಧ್ಯವಾಗುತ್ತದೆ, ಅದನ್ನು ಕೊಡಿಸಬೇಕಾ. There must be some uniformity, ಅದನ್ನು ಪರಿಶೀಲನೆ ಮಾಡಬೇಕು.

ಶ್ರೀ ಡಿ. ದೇವರಾಜ ಅರಸ್ —ಎರಡರಲ್ಲೂ ಯೋಚನೆ ಮಾಡುವುದು ಇದೆ, ನನ್ನ ದೃಷ್ಟಿಯಲ್ಲಿ ಎಲ್ಲಾ ಲೋನ್ ಪಾಲಿಸಿ ಸ್ವಲ್ಪ ಬದಲಾವಣೆ ಆಗಬೇಕು. ಕೆಲವು ಹೊಸ ಸೊಸೈಟಿಗಳು, ಫಾರ್ಮರ್ಸ್ ಕೋ ಆಪರೇಟಿವ್ ಸೊಸೈಟೀಸ್. That idea is also now put into practice. In our State than are 30-35 Societies which comprised larger number of share-holders. The area is more than Hubli i.e. not less than 10 thousand population. ಆ ಐಡಿಯಾ ಯೋಜನೆ ಮಾಡಬೇಕಾಗುತ್ತದೆ. ಸ್ಮಾಲ್ ಸೊಸೈಟಿಗಳು ಮಾಡಿ ಅವು ಫಿಸಿಬಲ್ ಆಲ್ಲ ಯೂನಿಫಾರಂ ಆಗುತ್ತಾ ಇಲ್ಲ ಎನ್ನುವುದು ತಮಗೆ ಅನುಭವ ಇದೆ. ಪಂಚಾಯಿತಿ ಒಂದು ಇರುವುದರಿಂದ ಇದು ಆಗುವುದಿಲ್ಲ ಸೊಸೈಟಿಗಳನ್ನು ಮಾಡುವ ದೃಷ್ಟಿಯಲ್ಲಿ ಕೆಲವುಕಡೆ ವರ್ಕ್ ಮಾಡುವುದಕ್ಕೆ ಪ್ರಾರಂಭ ಮಾಡಿವೆ. ಈಗ ಕೊಡುವ ಸಾಲ ಬಹಳ ಕಡಿಮೆ ಒಂದು ಎಕರೆಗೆ ಇಪ್ಪತ್ತು ಎಂದು ಗೊತ್ತು ಮಾಡಿರುತ್ತೇವೆ. ಮಧ್ಯಮಾವಧಿ ಸಾಲ ಎಲ್ಲರಿಗೂ ಸಿಗುವುದಿಲ್ಲ,

ಕೆಲವರಿಗೆ ಮಾತ್ರ ಸಿಕ್ಕುತ್ತದೆ. ಅಲ್ಪಾವಧಿ ಸಾಲ ಬಹಳ ಜನರಿಗೆ ಸಿಕ್ಕುತ್ತದ. ಕ್ರಾಫ್ಸ್ ಫೆಲ್ಯೂರ್ ಆಗಿದೆ ಎಂದು ಹೇಳಬಹುದು ಇಂಪ್ಲಿಮೆಂಟ್ಸ್‌ಗೆ, ಎತ್ತುಗಳಿಗೆ ಸಾಲ ಕೊಟ್ಟು ಆವನಿಂದ ನೇರವಾಗಿ ಸೊಸೈಟಿಗೆ ಬೆಳೆದಂತ ಪದಾರ್ಥಗಳನ್ನು ಸರಿಯಾದ ಬೆಲೆಗೆ ತೆಗೆದುಕೊಳ್ಳತಕ್ಕಂತ ಕೆಲಸವನ್ನು ಕಂಪ್ಲೀಟ್ ಆಗಿ ಸೊಸೈಟಿಗೆ ಟೈಪ್ ಮಾಡಿದರೆ ಒಂದು ವರ್ಷ ತೊಂದರೆ ಆದರೂ, ಆ ತೊಂದರೆಯನ್ನು ನಿವಾರಣೆ ಮಾಡಿಕೊಳ್ಳುವುದಕ್ಕೆ ಸಹಾಯ ಮಾಡಿ, ಮುಂದೆ ರಿಕವರಿ ಮಾಡಿಕೊಳ್ಳಬೇಕು ಆ ತರಹ ಇರಬೇಕು. ಸೊಸೈಟಿಯಿಂದ ಸಹಾಯ ತೆಗೆದುಕೊಳ್ಳುವವರು ಯಾರಿದ್ದಾರೆ ಅವರಿಂದ ಬೆಳೆಗಳು ಹಾಳಾಗಿ ಹೋದಾಗ ರಿಕವರಿ ಮಾಡುವುದಕ್ಕೆ ಆಗುವುದಿಲ್ಲ ಅದು ಒಂದು ಅಭಿಪ್ರಾಯ ಇರುತ್ತದೆ That is a nationalised bank with which we can talk. Again we can talk with the Reserve Bank. I am also thinking of writing to the Government of India in this behalf and initiate discussion particularly on this policy of loan being given to the farmers especially in areas where the dry farmers are in great number.

MADAM SPEAKER.—Now Question Hour is over.

QUESTION FOR ANSWERS ON THE DAY

(but not taken up)

** Drinking Water Wells in Villages of Sira Taluk*

343. SRI T. TARE GOWDA (Kallambella).—Will the Minister for Rural Development and Social Welfare be pleased to state.—

(*a*) whether the Government is aware that there are no drinking water wells at Kanchiganahalli, Karehalli, Janakal and Gungarapente, Ranganahalli, Chikkagrahara in Bukkapatna Hobli, Sira Taluk and Naragondanahalli Hulikunte Hobli, Sira Taluk, Tumkur District.

(*b*) whether the Government would provide funds to the TDB, Sira, to construct drinking water wells in the above mentioned villages.

(*c*) whether Government is aware that additional drinking water wells are required for the following villages in Sira Taluk :

1. Dodda Agrahara, Bukkapatna Hobli
2. Tuppadakona ,,
3. Karenahalli ,,
4. Ranganahalli, Hamlet Huildore
5. Madalur, Kasaba Hobli
6. Guleganhalli ,,
7. Hegganahalli ,,
8. Nyayagere A. K. Colony
9. Mugankhalli, Gollarahatte
10. Sirodadu A. D. Well, Kallambella Hobli
11. Jogihalli, Hamlet of Siebi Agrahara